# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೨, **ಆಗಸ್ಟ್**, ೨೦೨೫( **ಶ್ರಾವಣ** ,೨೧, ಶಕವರ್ಷ, ೧೯೪೭)<br>BENGALURU, TUESDAY, 12, AUGUST, 2025 ( SHRAVANA ,21 , SHAKAVARSHA, 1947) | ನಂ. ೪೬೬<br>No. 466 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–44)**

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂ. 21)ನ್ನು**,** ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ**;**

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ**,** 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಹೊಸ ಪ್ರಕರಣ 3ಎ ಸೇರ್ಪಡೆ.-** ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂ. 21)ರ, 3ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"3-ಎ. ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ.-** (1) ಪ್ರವಾಸೋದ್ಯಮ ವ್ಯಾಪಾರವನ್ನು ಸುಗಮಗೊಳಿಸುವ, ನಿಯಂತ್ರಿಸುವ ಮತ್ತು ಉತ್ತೇಜಿಸುವ ಕುರಿತು ಪ್ರಸ್ತಾವನೆವನ್ನು ಪರಿಶೀಲಿಸಲು

ಮತ್ತು ಸಲ್ಲಿಸಲು ಸಂಬಂಧಪಟ್ಟ ಜಿಲ್ಲೆಯ ಅಧಿಕಾರವ್ಯಾಪ್ತಿಯಲ್ಲಿನ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:-

| | | |
|---|---|---|
| (ಎ) | ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ | ಪದನಿಮಿತ್ತ ಅಧ್ಯಕ್ಷರು |
| (ಬಿ) | ಸಂಬಂಧಪಟ್ಟ ಜಿಲ್ಲೆಯ ಪೊಲೀಸ್ ಸೂಪರಿಂಟೆಡೆಂಟ್ | ಪದನಿಮಿತ್ತ ಸದಸ್ಯರು |
| (ಸಿ) | ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಪದನಿಮಿತ್ತ ಸದಸ್ಯರು |
| (ಡಿ) | ಸಂಬಂಧಪಟ್ಟ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ | ಪದನಿಮಿತ್ತ ಸದಸ್ಯರು |
| (ಇ) | ಸಂಬಂಧಪಟ್ಟ ಜಿಲ್ಲಾ ಅಧಿಕಾರವ್ಯಾಪ್ತಿಯ ಸೂಪರಿಂಟೆಂಡಿಂಗ್ ಎಂಜಿನಿಯರ್, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಎಫ್) | ಸಂಬಂಧಪಟ್ಟ ಜಿಲ್ಲೆಯ ಪುರಾತತ್ವ ಇಲಾಖೆಯ ಉಪ ನಿರ್ದೇಶಕರು | ಪದನಿಮಿತ್ತ ಸದಸ್ಯರು |
| (ಜಿ) | ಪ್ರವಾಸಿ ಮತ್ತು ಪ್ರವಾಸೋದ್ಯಮ ವಲಯದ ಸಂಬಂಧಪಟ್ಟ ಉದ್ಯಮದಲ್ಲಿ ತೊಡಗಿಕೊಂಡಿರುವವರ ಪೈಕಿ ಸಾಕಷ್ಟು ಜ್ಞಾನವುಳ್ಳ ಮತ್ತು ಅವರವರ ಸಂಬಂಧಪಟ್ಟ ಕ್ಷೇತ್ರದಲ್ಲಿ ವೃತ್ತಿ ಅನುಭವ ಹೊಂದಿರುವ, ರಾಜ್ಯ ಸರ್ಕಾರವು, ನಾಮ ನಿರ್ದೇಶಿಸಿದ ಮೂವರು ಸದಸ್ಯರು ಹಾಗೂ ಜಿಲ್ಲಾ ಸಮಿತಿಯು ನಾಮನಿರ್ದೇಶಿಸಿದ ಮೂವರು ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು:<br>ಪರಂತು ಆರು ಸದಸ್ಯರ ಪೈಕಿ ಒಬ್ಬ ಮಹಿಳಾ ಸದಸ್ಯೆ ಇರತಕ್ಕದ್ದು. | ಸದಸ್ಯರು |

| | | |
|---|---|---|
| (ಎಚ್) | ಸಂಬಂಧಪಟ್ಟ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ, ಉಪ ನಿರ್ದೇಶಕರು | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(3) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು, ಸಂಬಂಧಪಟ್ಟ ಜಿಲ್ಲೆಯ ಅಧಿಕಾರವ್ಯಾಪ್ತಿಯೊಳಗಿನ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕಾಮಗಾರಿಗಳು/ಪ್ರಸ್ತಾವನೆಗಳಿಗಾಗಿ ರಾಜ್ಯ ಪ್ರವಾಸೋದ್ಯಮ ಪರಿಷತ್ತಿಗೆ ಸೂಕ್ತವಾದ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಂಬಂಧಪಟ್ಟ ಜಿಲ್ಲಾ ಅಧಿಕಾರವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ವ್ಯಾಪಾರವನ್ನು ಸುಗಮಗೊಳಿಸುವ, ನಿಯಂತ್ರಿಸುವ ಮತ್ತು ಉತ್ತೇಜಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಲು ಮತ್ತು ಸಲ್ಲಿಸಲು ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸುವುದಕ್ಕಾಗಿ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂ. 21)ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ,

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಹೆಚ್. ಕೆ. ಪಾಟೀಲ**
ಕಾನೂನು, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

SEVENTH SESSION

# THE KARNATAKA TOURISM TRADE (FACILITATION AND REGULATION) (AMENDMENT) BILL, 2025

## (LA Bill No. 44 of 2025)

A Bill to amend the Karnataka Tourism Trade (Facilitation and Regulation) Act, 2015.

Whereas it is expedient to amend the Karnataka Tourism Trade (Facilitation and Regulation, Act, 2015 (Karnataka Act No. 21 of 2015) for the purpose hereinafter appearing:

Be it enacted by the Karnataka State Legislature in the seventy sixth year of the Republic of India as follows :-

**1. Short title and commencement.-** (1) This Act may be called the Karnataka Tourism Trade (Facilitation and Regulation) (Amendment) Act, 2025.

(2) It shall come into force at once.

**2. Insertion of new section 3-A.-** In Karnataka Tourism Trade (Facilitation and Regulation) Act, 2015 (Karnataka Act No. 21 of 2015, after section 3, the following shall be inserted, namely:-

**“3-A. District Level Monitoring Committee.-** (1) There shall be constituted a District Level Monitoring Committee to review and submit the proposal regarding facilitation, regulating and promotion of tourism trade in the jurisdiction of concerned District.

(2) The District Level Monitoring Committee shall consist of the following members, namely:-

| | | |
|---|---|---|
| (a) | Deputy Commissioner of the concerned District | Ex-officio Chairperson |
| (b) | Superintendent of Police of the concerned District | Ex-officio member |
| (c) | Chief Executive Officer of Zilla Panchayat of the concerned District | Ex-officio member |
| (d) | Deputy Conservator of forest of the concerned District | Ex-officio member |
| (e) | Superintending Engineer, Public Works Department of the concerned Jurisdictional District | Ex-officio member |
| (f) | Deputy Director of Archaeological Department of the concerned District | Ex-officio member |
| (g) | Three members nominated by the State Government and three members nominated by the District Committee from amongst the concerned stakeholders of travel and tourism sector having adequate knowledge and professional experience in their respective fields of which at least one shall be a person belonging to the Scheduled Caste or Scheduled Tribes and one person belonging to Backward Classes:<br>Provided that out of six members one member shall be a woman. | Members |
| (h) | Deputy Director, Tourism, Department of the concerned District | Ex-officio member Secretary |

(3) The District Level Monitoring Committee shall submit suitable proposals to the State Tourism Council for the works/proposals to be undertaken in respect of their departments within the jurisdiction of the concerned district.

**STATEMENT OF OBJECTS AND REASONS**

It is considered necessary to amend the Karnataka Tourism Trade (Facilitation and Regulation) Act, 2015, (Karnataka Act No. 21 of 2015) to constitute a District Level Monitoring Committee to review and submit the proposal regarding facilitation, regulating and promotion of tourism trade in the jurisdiction of concerned District.

Hence the Bill.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## FINANCIAL MEMORANDUM

There is no extra expenditure involved in the proposed legislative measure.

**H. K. PATIL**
Minister for Law, Human Rights, Parliamentary
Affairs and
Legislation and Tourism

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH